# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆಃ** 5028/2024 ಫ್ರಾಸಾ-02
ಚಾಸಾ-07

ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಂಗಯ್ಯ |
| **ತಂದೆಯ / ಗಂಡನ ಹೆಸರು** | ಓಬಳಪ್ಪ |
| **ವಯಸ್ಸು** | 50 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ದೇವರಬೆಟ್ಟ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ರತ್ನಮ್ಮ ನನ್ನ ಸೊಸೆ , ಆರೋಪಿ ನನ್ನ ಅಣ್ಣನ ಮಗ. ಆರೋಪಿ ಮತ್ತು ರತ್ನಮ್ಮ ಇಬ್ಬರ ನಡುವೆ ಸಂಬಂಧ ಅನೂನ್ಯವಾಗಿತ್ತು. ರತ್ನಮ್ಮ ಜೀವಂತ ಇರುವುದಿಲ್ಲ. ಆಕೆ ಯಾವ ರೀತಿ ತೀರಿಕೊಂಡಿಕೊಂಡಿದ್ದಾಳೆ ಮತ್ತು ಆಕೆಯ ಸಾವಿಗೆ ಕಾರಣ ಎಂದು ನನಗೆ ಗೊತ್ತಿಲ್ಲ. ರತ್ನಮ್ಮ 2 ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ನಾನು ಶವವನ್ನು post mortem ಮಾಡುವಾಗ ನೋಡಿರುತ್ತೇನೆ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ಆರೋಪಿಗೆ ಕುಡಿಯುವ ಅಭ್ಯಾಸವಿತ್ತು , ರತ್ನಮ್ಮ ದುಡಿದು ತಂದ ಹಣವನ್ನು ಕುಡಿಯಲು ಆರೋಪಿಗೆ ಕೊಡದೇ ಇದ್ದಾಗ ಆರೋಪಿ ಅವಳ ಮೇಲೆ ಗಲಾಟೆ ಮಾಡಿ ನೇಣು ಹಾಕಿಕೊಂಡು ಸಾಯಿ ಎಂದು ಪ್ರಚೋದನೆ ನೀಡುತ್ತಿದ್ದ ಎಂದರೆ ಸರಿಯಲ್ಲ.

ದಿ. 04.04.2024 ರಂದು 4-30 ಗಂಟೆಗೆ ಆರೋಪಿ ರತ್ನಮ್ಮಳ ಬಳಿ ಹೋಗಿ ಮದ್ಯ ಸೇವನೆ ಮಾಡಲು 50/- ರೂ ಹಣ ಕೇಳಿದ್ದು , ಹಣ ಕೊಡದೇ ಇದ್ದಾಗ ರತ್ನಮ್ಮಳ ಮೇಲೆ ಗಲಾಟೆ ಮಾಡಿ ಅವಳಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ನೇಣು ಹಾಕಿಕೊಳ್ಳಲು ಪ್ರಚೋದನೆ ನೀಡಿದ್ದರಿಂದ ರತ್ನಮ್ಮ ಅದೇ ದಿನ ಸಂಜೆ 4-30 ಗಂಟೆಗೆ ತನ್ನ ವಾಸದ ಮನೆಯ ಅಡಿಗೆ ಕೋಣೆಯಲ್ಲಿ ಶೀಟ್ ಗೆ ಹಾಕಿದ್ದ ಕಬ್ಬಿಣದ ಪೈಪ್ ಗೆ ಸೀರೆ ಯಿಂದ ನೇಣು ಹಾಕಿಕೊಂಡಿರುವುದು ಅಕ್ಕ ಪಕ್ಕದ ಮನೆಯವರು ಮತ್ತು ನಾನು ರತ್ನಮ್ಮಳನ್ನು ನೇಣು ಕುಣಿಕೆಯಿಂದ ಇಳಿಸಿ ಆಸ್ಪತ್ರೆಗೆ ಆಂಬುಲೆಯನ್ಸ್ ನಲ್ಲಿ ಕರೆದುಕೊಂಡು ಹೋಗಿದ್ದು , ದಾರಿ ಮಧ್ಯದಲ್ಲಿ ರತ್ನಮ್ಮ ರಾತ್ರಿ 10-30 ಗಂಟೆಗೆ ತೀರಿಕೊಂಡಿರುತ್ತಾಳೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿರುವ ಶವ ಪಂಚನಾಮೆಯನ್ನು ನೋಡಿದೇನು ಅದನ್ನು ಗುರುತಿಸುತ್ತೇನೆ. ಸದರಿ ಶವ ಪಂಚನಾಮೆಯನ್ನು ನಿಪಿ-2 ಎಂದು, ನನ್ನ ಹೇಳಿಕೆಯ ನಿಪಿ-2(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು:-ಶ್ರೀ. ಪಿ.ಎನ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**